**ಸಾಕ್ಷಿಯನ್ನು ದಿಃ _05/06/2026_ ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು : ಶ್ರೀಮತಿ ಎಂಎಹೆಚ್ ವಾದಿ ಪರ ವಕೀಲರಿಂದ.***

ನನಗೆ ವಾದಿಯು ಗೊತ್ತು. ಪ್ರತಿವಾದಿ ನಂ.1 ರಿಂದ 7 ನನಗೆ ಗೊತ್ತು. ವಾದಿ ಮತ್ತು ಪ್ರತಿವಾದಿ ನಂ.1 ರಿಂದ 7 ಎಲ್ಲರೂ ಸಹೋದರ ಸಹೋದರಿಯರು ಎಂದರೆ ಸರಿ. ದಾವಾದ ಕಾರಣ ನನಗೆ ಗೊತ್ತಿಲ್ಲ. ವಾದಿಯರ ತಂದೆ ನನಗೆ ಸಂಬಂಧದಲ್ಲಿ ಮಾವನಾಗಬೇಕು. ದಾವಾ ಸ್ವತ್ತು ವಾದಿಯರ ತಂದೆಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಯರ ತಂದೆಗೆ ಸರಕಾರದಿಂದ ಮಂಜೂರಾದ ಜಮೀನು ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ 54. ಸದರಿ ಸರ್ವೇ ನಂಬರನ ಒಟ್ಟು ಕ್ಷೇತ್ರ ನನಗೆ ಗೊತ್ತಿಲ್ಲ. ವಾದಿಯರ ತಂದೆ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ ಕಾರಣ ದಾವಾ ಸ್ವತ್ತು ಮಂಜೂರು ಆಗಿರುವ ವಿಷಯ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ನಂ.1 ರಿಂದ

7 ರವರು ಈಗಲೂ ಒಟ್ಟು ಕುಟುಂಬದಲ್ಲಿದ್ದು, ದಾವಾ ಸ್ವತ್ತನ್ನು ಕೂಡಿಯೇ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ನಿಮಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ನನಗೆ ಸೊಸೈಟಿಯವರು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ವಾದಿಯರ ತಂದೆಗೆ ದಾವಾ ಜಮೀನು ಮಂಜೂರು ಆಗಿರುವ ಕಾರಣ ದಾವಾ ಜಮೀನನ್ನು ಅಥವಾ ಅದರ ಭಾಗವನ್ನು ಸೊಸೈಟಿ/ಪ್ರತಿವಾದಿ ನಂ.9 ರವರು ನನಗೆ ಕೊಡಲು ಯಾವುದೇ ಹಕ್ಕು ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ನಂತರ ಅದನ್ನು ಮಂಜೂರು ಮಾಡುವ ಹಕ್ಕು 9 ನೇ ಪ್ರತಿವಾದಿಗೆ ಇಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು ಮಂಜೂರಾತಿ ಕೋರಿ ನಾನು ಅರ್ಜಿ ಸಲ್ಲಿಸಿಲ್ಲ, ಆದ್ದರಿಂದ ದಾವಾ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ದಕ್ಕುವುದಿಲ್ಲ ಅಥವಾ ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ.

ವಾದಿಯರ ತಂದೆಗೆ 1974 ರಲ್ಲಿ ದಾವಾ ಜಮೀನು ಮಂಜೂರು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ಮತ್ತು ನನಗೆ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದ ದಾವಾ ಸ್ವತ್ತಿನ ಕ್ಷೇತ್ರ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲದೇಯಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : ಪ್ರತಿವಾದಿ ನಂ.1 ರಿಂದ 7 ಮತ್ತು 9 ರವರು ಏಕಪಕ್ಷೀಯವಾಗಿರುತ್ತಾರೆ, ಕಾರಣ ಪಾಟೀ ಸವಾಲು ಇರುವುದಿಲ್ಲ.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.